## ಪದಬಂಧ



**ಎಡದಿಂದ ಬಲಕ್ಕೆ**

1. ಅಭ್ಯಾಸವನ್ನು ಮಾಡುವುದರಲ್ಲೇ ಭಾರೀ ಕೊರತೆ 3
3. ಪಕ್ಷಾಂತರಕ್ಕೇ ಪ್ರೋತ್ಸಾಹ; ನೇರ ಕಾಣುವಂತಿಲ್ಲ ಅಷ್ಟೇ 3
4. ಶೋಧನೆಗಾಗಿ ಹೊರಟವರ ಒಟ್ಟು ಸಂಖ್ಯೆ ಸರಿಯಾಗಿ ಹತ್ತು 3
6. ಕರ್ಪೂರವೂ ಪೂಜೆಗೆ ಒಂದು ಸಾಮಗ್ರಿಯೇ ತಾನೇ? 4
7. ಮುಂದಿನದೇನೇ ಇರಲಿ, ಆತನಿಗೆ ಮರ್ಯಾದೆಯೇ ಐಶ್ವರ್ಯ 4
9. ನ್ಯಾಯವಂತನೆಂದು ಸಾಧಿಸಿದ್ದಕ್ಕೆ ಸಿಕ್ಕ ಬಹುಮಾನ ಬೆಣ್ಣೆ 4
11. ಅಪ್ಪನ ಒಳ್ಳೆಯ ಕಾರ್ಯಗಳನ್ನು ಕೈ ಬಿಡುವುದು ದ್ರೋಹವೇ ಆದೀತು 4
15. ಸಹವಾಸವನ್ನು ಎತ್ತಿ ತೋರುವಂತಿದೆ ಆತನ ವಸ್ತ್ರ 3
16. ಧೀರರ ಮೈಯಲ್ಲಿರುವುದೂ ಅದೇ ರಕ್ತವೇ ತಾನೇ? 3
17. ಕೊಟ್ಟ ಹಣವನ್ನು ಹಿಂದಕ್ಕೆ ಪಡೆಯುವುದು ಸುಲಭವಲ್ಲ 3

**ಮೇಲಿನಿಂದ ಕೆಳಕ್ಕೆ**

1. ಅಮ್ಮನ ಕ್ಷೇಮವನ್ನು ತಿಳಿಯದೆ ಬಂದದ್ದು ಮನ್ನಿಸಲು ಯೋಗ್ಯವೇ ಅಲ್ಲ 3
2. ದೇವತೆಯನ್ನೇ ಹೋಲುವಂತಿದೆ ಆಕೆಯ ಮುಖ 3
3. ಪೆದ್ದನ ಕೈಗೆ ಹೇಗೆ ಬಂತು ಕಂಠದಲ್ಲಿ ಧರಿಸುವ ಈ ಬಹುಮಾನ? 3
5. ವ್ಯಾಕರಣವನ್ನು ಪ್ರಶಂಸಿಸುವ ಪದ್ಯ ಇದು 3
6. ಪಿತಾಮಹರನ್ನು ಅಪಮಾನಿಸಿದ್ದಕ್ಕೆ ಕೆಳಕ್ಕೆ ಬಿದ್ದ ಈ ಸ್ಥಿತಿ 3
8. ತಕ್ಷಣವೇ ನೌಕರಿ ಬೇಕೆಂದರೆ ಇಲ್ಲವೆಂದರೇ? 3
10. ನೀವು ಅರಸುತ್ತಿರುವ ಸ್ಥಳದಲ್ಲಿ ಸಂಪೂರ್ಣ ನಿಶ್ಶಬ್ದ 3
12. ದರ್ಪಣದ ಹಿಂದೆ ಅದೇನು ಮತ್ತೊಂದು ಹಾಳೆ? 3
13. ಕಾಣಿಕೆಯನ್ನೊಪ್ಪಿಸಲೆಂದು ಆಕೆ ತಂದದ್ದು ಚಿನ್ನ ಹೌದೇ? 3
14. ಋಣವನ್ನು ಪರಿಹರಿಸಲು ನೆರವಾದದ್ದು ಸಾಗರ ದೇವ! 3

---

### 19—01—2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಅರಿಸಿನ 3. ಅಖಾಡ 4. ಖಬರು 6. ಗುರುತರ 7. ಪಾರಾವಾರ 8. ಧನದಾಸ 10. ಗೇಣಿಕಾರ 12. ತಾರುಮಾರು 14. ಭಗವಂತ 16. ಗಡವ 17. ರುಮಾಲು 18. ನಜರಾಣಿ

**ಮೇಲಿನಿಂದ ಕೆಳಕ್ಕೆ**

1. ಅಡಗು 2. ನಖರ 3. ಅಹವಾಲು 5. ರುಜಿನ 7. ಪಾವಟಿಗೆ 9. ಸಹಸ್ರಾರು 11. ಕಾಳಿಂಗ 13. ಬಾರುಕೋಲು 14. ಭವನ 15. ತರುಣಿ

**ಪ್ರಶ್ನಾಂಕಣ**

# ಬಾಂಬ್ ಸೈಕ್ಲೋನ್ ಎಂದರೇನು?

ಬಾಂಬೋಜೆನೆಸಿಸ್ ವಿದ್ಯಮಾನಕ್ಕೆ ಒಳಗಾಗಿ ವಿಪರೀತ ಉಗ್ರ ಸ್ವರೂಪವನ್ನು ಪಡೆಯುವ ಸೈಕ್ಲೋನ್‌ಗೆ 'ಬಾಂಬ್ ಸೈಕ್ಲೋನ್' ಎಂಬ ವಿಶೇಷ ಹೆಸರು. ನಿಮಗೇ ತಿಳಿದಂತೆ ಸೈಕ್ಲೋನ್ ಒಂದು ಬಗೆಯ ಹವಾ ವಿದ್ಯಮಾನ. ಕಡಲಿನ ಮೇಲೆ ಅವತರಿಸಿ, ಕಡಲನ್ನೇ ಕಲಕಿ ಅಲ್ಲೋಲಕಲ್ಲೋಲ ಏರ್ಪಡಿಸಿ, ರಕ್ಕಸ ಅಲೆಗಳನ್ನು ಬಡಿದೆಬ್ಬಿಸಿ, ಬಿರುಗಾಳಿಯ ಹುಯಿಲೆಬ್ಬಿಸಿ, ಆಗಸಕ್ಕೆಲ್ಲ ಮೋಡ ಹೊದಿಸಿ, ಕುಂಭದ್ರೋಣ ಮಳೆ ಸುರಿಸಿ, ಕರಾಳ ಪರಿಸರ ಸೃಷ್ಟಿಸಿ, ಜನಜೀವನವನ್ನು ಅಸ್ತವ್ಯಸ್ತಗೊಳಿಸುವ ಭೀಕರ ಹವಾ ವಿದ್ಯಮಾನ ಅದು. ಬಹು ಸೌಮ್ಯ ಸ್ವರೂಪದ ಸೈಕ್ಲೋನ್‌ಗಳನ್ನು 'ವಾಯುಭಾರ ಕುಸಿತ' (ಡಿಪ್ರೆಶನ್) ಎಂದೂ, ಸಾಮಾನ್ಯ ಸೈಕ್ಲೋನ್‌ಗಳಿಗಿಂತ ಹೆಚ್ಚು ಶಕ್ತಿಯುತ ಸೈಕ್ಲೋನ್‌ಗಳನ್ನು ಬಾಂಬ್ ಸೈಕ್ಲೋನ್‌ಗಳೆಂದೂ ವರ್ಗೀಕರಿಸಲಾಗಿದೆ. ಇವುಗಳ ವಿಭಿನ್ನತೆಯ ಸ್ಪಷ್ಟ ವೈಜ್ಞಾನಿಕ ಸಂಕ್ಷಿಪ್ತ ವಿವರಣೆಗಳನ್ನು ಗಮನಿಸಿ:

ಯಾವುದೇ ಸೈಕ್ಲೋನ್‌ನ ವಿಶಿಷ್ಟ ಸ್ವರೂಪ ಇದು: ಕನಿಷ್ಠ 25 ಕಿ.ಮೀ. ವ್ಯಾಸದ ಒಂದು ಕೇಂದ್ರ. ಅದರ ಸುತ್ತ ಕನಿಷ್ಠ 500 ಕಿ.ಮೀ. ವ್ಯಾಪ್ತಿಗೆ ಹಬ್ಬಿ ತಾಸಿಗೆ ಕನಿಷ್ಠ 119 ಕಿ.ಮೀ ವೇಗದಲ್ಲಿ ಬೀಸುತ್ತ, ಕೇಂದ್ರದ ಸುತ್ತ ಅಷ್ಟೇ ವೇಗದಲ್ಲಿ ಸುತ್ತುತ್ತಿರುವ ಗಾಳಿ ರಾಶಿ. ಈ ಇಡೀ ಗಾಳಿ ರಾಶಿಯಲ್ಲಿ ದಟ್ಟೈಸಿದ ಗಾಢ ಮಳೆಮೋಡ ಸಾಮ್ರಾಜ್ಯ. ಕಡಲಿನಿಂದ ಮೇಲಕ್ಕೆ ಹಲವಾರು ಕಿ.ಮೀ. ಎತ್ತರಕ್ಕೆ ಮುಟ್ಟಿದ, ಸ್ಥಂಭಾಕಾರದ, ತಾಸಿಗೆ ಹತ್ತಾರು ಕಿ.ಮೀ. ವೇಗದಲ್ಲಿ ಓಡಲೂ ಆರಂಭಿಸುವ ಇಂಥ ಗಾಳಿ ವ್ಯವಸ್ಥೆಯೇ ಸೈಕ್ಲೋನ್ (ಚಿತ್ರ 4).

ಸೈಕ್ಲೋನ್‌ನ ಕೇಂದ್ರದ ಸುತ್ತ, ಎಂದರೆ ಸೈಕ್ಲೋನ್‌ನ ಕಣ್ಣಿನ ಸುತ್ತ (ಚಿತ್ರ 1 ಮತ್ತು 2 ರಲ್ಲಿ ಗಮನಿಸಿ) ತಿರುಗುವ ಗಾಳಿಯ ವೇಗ ತಾಸಿಗೆ 119 ಕಿ.ಮೀ.ಗಿಂತ ಕಡಿಮೆ ಇದ್ದು, ಕೇಂದ್ರ ಭಾಗದ ಗಾಳಿಯ ಒತ್ತಡ 980 ಹೆಕ್ಟೋಪ್ಯಾಸ್ಕಲ್ (ಮಿಲಿ ಬಾರ್)ಗಿಂತ ಹೆಚ್ಚಿದ್ದರೆ ಅಂತಹ ಮಾರುತ ವ್ಯವಸ್ಥೆಯೇ ಡಿಪ್ರೆಶನ್ (ವಾಯುಭಾರ ಕುಸಿತ). ಕೇಂದ್ರದ ಸುತ್ತಲಿನ ಗಾಳಿಯ ವೇಗ ತಾಸಿಗೆ 119 ಕಿ.ಮೀ.ಗಿಂತ ಅಧಿಕ ಇದ್ದು, ಒತ್ತಡ 980 ಹೆಕ್ಟೋ ಪ್ಯಾಸ್ಕಲ್‌ಗಿಂತ ಕಡಿಮೆ ಇದ್ದರೆ ಅದು ಸೈಕ್ಲೋನ್. ಕೇಂದ್ರದ ಸುತ್ತಲಿನ ಗಾಳಿಯ ವೇಗ ತಾಸಿಗೆ 150 ಕಿ.ಮೀ ನ ಆಸುಪಾಸಿನಲ್ಲಿದ್ದು, ಕೇಂದ್ರದ ಗಾಳಿ ಒತ್ತಡ 980 ಹೆಕ್ಟೋಪ್ಯಾಸ್ಕಲ್‌ಗಿಂತ ಕಡಿಮೆ ಇದ್ದು ಈ ಒತ್ತಡ 24 ತಾಸುಗಳೊಳಗೆ 24 ಹೆಕ್ಟೋಪ್ಯಾಸ್ಕಲ್‌ಗಿಂತ ಹೆಚ್ಚು ಕುಸಿದರೆ ಆ ವಿದ್ಯಮಾನವೇ 'ಬಾಂಬೋಜೆನೆಸಿಸ್'; ಅಂಥ ಸೈಕ್ಲೋನ್‌ಗಳೇ 'ಬಾಂಬ್ ಸೈಕ್ಲೋನ್'ಗಳು.




ಮತ್ತೂ ವಿಶೇಷ ಏನೆಂದರೆ, ಸೈಕ್ಲೋನ್‌ಗಳು ಸಮಭಾಜಕದ ಆಸುಪಾಸಿನಲ್ಲಿ ಅವತರಿಸುತ್ತವಾದರೆ ಬಾಂಬ್ ಸೈಕ್ಲೋನ್‌ಗಳು ಮಧ್ಯ ಅಕ್ಷಾಂಶ ಪ್ರದೇಶಗಳಲ್ಲೇ ಹೆಚ್ಚು. ಸಾಮಾನ್ಯ ಸೈಕ್ಲೋನ್‌ಗಳು ಬೇಸಿಗೆಯಲ್ಲೇ ಅಧಿಕವಾದರೆ ಬಾಂಬ್ ಸೈಕ್ಲೋನ್‌ಗಳು ಚಳಿಗಾಲದಲ್ಲೇ ಅಧಿಕ. ಬಾಂಬ್ ಸೈಕ್ಲೋನ್‌ಗಳು ಸಾಮಾನ್ಯ ಸೈಕ್ಲೋನ್‌ಗಳಂತೆ ಬಿರುಗಾಳಿ, ಮಳೆಗಳನ್ನಷ್ಟೇ ಅಲ್ಲದೆ ಭಾರೀ ಹಿಮಪಾತವನ್ನೂ ಸೃಜಿಸುತ್ತವೆ.

**■ ಎನ್. ವಾಸುದೇವ್**